O.S .No. 78/2011
PW-1

ದಿನಾಂಕ: 14.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು **5** ಮತ್ತು **6** ನೇ ಪ್ರತಿವಾದಿ ಪರ ಶ್ರೀ ಬಿ.ಆರ್.ಎಲ್. ವಕೀಲರಿಂದಃ</u>

ದಾವೆಯಲ್ಲಿ ಪ್ರತಿವಾದಿಗಳ ವಿರುದ್ಧ ಏನು ಪರಿಹಾರ ಕೋರಿರುತ್ತೀರಾ ಎಂದರೆ ಸಾಕ್ಷಿ ರಕ್ಷಣೆ ಕೋರಿ ಹೂಡಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಸ.ನಂ.14/2, ವಿಸ್ತೀರ್ಣ 5 ಎಕರೆ 19 ಗುಂಟೆ ಆಗಿರುತ್ತದೆ. ದಾವಾ ಆಸ್ತಿ 1 ರಿಂದ 6 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾಗಿರುತ್ತದೆಂದರೆ ಸುಳ್ಳು. ದಾವೆಯನ್ನು ರಕ್ಷಣೆಯನ್ನು ಯಾರ ವಿರುದ್ಧ ಕೋರಿ ಹೂಡಿದ್ದೀರಿ ಎಂದರೆ ಸಾಕ್ಷಿ 1 ರಿಂದ 3, ಪುಟ್ಟನಾಯಕ @ ಗೆಂಡೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ತಿಮ್ಮನಾಯಕ ಹಾಗೂ ಜವರಮ್ಮ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆಂದರೆ ಸುಳ್ಳು. 5 ಮತ್ತು 6 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನ ಹೊಂದಿ, ಉಳುಮೆ ಮಾಡುತ್ತಿದ್ದರೂ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿ ನಿಮಗೆ ಕ್ರಯಕ್ಕೆ ಮಾಡಿದ ವ್ಯಕ್ತಿಗಳಿಗೆ ಹೇಗೆ ಬಂತು ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಅವರಿಗೆ ಪಿತ್ರಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸಂಬಂಧ ಇದೇ ನ್ಯಾಯಾಲಯದಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಅಸಲು ದಾವೆ ನಂ.129/2013 ರಂತೆ ಭಾಗ ಕೋರಿ ದಾವೆ ಹೂಡಿದ್ದಾರೆಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ನೀವು ಸಹ 27 ನೇ ಪಕ್ಷಗಾರರಾಗಿರುತ್ತೀರಿ ಎಂದರೆ ಸರಿ. ಪ್ರಸ್ತುತ ದಾವೆಯ 1 ರಿಂದ 4 ನೇ ಪ್ರತಿವಾದಿಗಳು ಅಸಲು ದಾವೆ ನಂ.129/2013 ರ ದಾವೆಯಲ್ಲಿ 20 ರಿಂದ 23 ಪ್ರತಿವಾದಿಗಳು ಆಗಿರುತ್ತಾರೆಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಅಸಲು ದಾವೆ ನಂ.129/2013 ರಲ್ಲಿ ಈ ದಾವೆಯ ದಾವಾ ಆಸ್ತಿಯನ್ನು ಸಹ ಸೇರ್ಪಡೆ ಮಾಡಿ ಭಾಗ ಕೋರಲಾಗಿದೆ ಎಂದರೆ ಸರಿ.

ದಾವಾ ಆಸ್ತಿ ಮೂಲ ಯಾರ ಹೆಸರಿನಲ್ಲಿ ನಮೂದು ಇತ್ತು ಎಂದರೆ ಸಾಕ್ಷಿ ಮೂಗನಾಯಕ ಎಂದು ಹೇಳುತ್ತಾರೆ. ದಾವಾ ಆಸ್ತಿ ಮೂಲ ಮೂಗನಾಯಕರವರ ಹೆಸರನಲ್ಲಿತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಉಪವಿಭಾಗಾಧಿಕಾರಿ ರವರ ಆದೇಶದ ಪ್ರತಿ ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ಹೊರತುಪಡಿಸಿ ಬೇರೆ ಕಂದಾಯ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ಮೂಲತಃ ವೆಂಕಟಯ್ಯ ಬಿನ್ ಜವರ ರವರಿಗೆ ಸೇರಿದ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಆ ಸ್ವತ್ತು ಮಾರಾಟಗಾರರಿಗೆ ಹೇಗೆ ಬಂತು ಎಂದು ನೋಡಿ ತಿಳಿದುಕೊಳ್ಳುತ್ತಾರೆಂದರೆ ಸರಿ. ವೆಂಕಟಯ್ಯ ಬಿನ್ ಜವರ ರವರಿಗೆ ಎಷ್ಟು ಜನ

ಮಕ್ಕಳಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವೆಂಕಟಯ್ಯ ಬಿನ್ ಜವರ ರವರಿಗೆ ಮೂಗನಾಯಕ, ಮುದ್ದನಾಯಕ, ವೆಂಕಟನಾಯಕ, ಎಲೆಚಿಕ್ಕನಾಯಕ ಮತ್ತು ತಿಮ್ಮನಾಯಕ ಎಂಬ ಐದು ಜನ ಮಕ್ಕಳು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ವೆಂಕಟಯ್ಯ ಬಿನ್ ಜವರ ರವರ ಐದು ಮಕ್ಕಳಿಗೂ ಸಮಾನವಾದ ಹಕ್ಕು ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ಇಂಡೆಕ್ಸ್ ಆಫ್ ಲ್ಯಾಂಡ್ ನ್ನು ತೋರಿಸಿದ್ದು, ಅದರಂತೆ ದಾವಾ ಆಸ್ತಿ ವೆಂಕಟಯ್ಯ ಬಿನ್ ಜವರ ಮತ್ತು ಅವರ ಐದು ಮಕ್ಕಳ ಹೆಸರಿಗೆ ನಮೂದು ಇದೆ ಎಂದರೆ ಸಾಕ್ಷಿ ನನಗೆ ಸರಿಯಾಗಿ ಕಾಣುತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ರೆಕಾರ್ಡ್ ಆಫ್ ರೈಟ್ಸ್ ನ್ನು ಸಾಕ್ಷಿಗೆ ತೋರಿಸಿದ್ದು,

ಅದರಂತೆ ದಾವಾ ಆಸ್ತಿ ವೆಂಕಟಯ್ಯ ಬಿನ್ ಜವರ ಮತ್ತು ಅವರ ಐದು ಮಕ್ಕಳ ಹೆಸರಿಗೆ ನಮೂದು ಇದೆ ಎಂದರೆ ಸಾಕ್ಷಿ ನನಗೆ ಸರಿಯಾಗಿ ಕಾಣುತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-7 ರಲ್ಲಿ ವೆಂಕಟನಾಯಕ 5 ಎಕರೆ 28 ಗುಂಟೆ ಎಂದು ನಮೂದು ಇದೆ ಎಂದರೆ ಸರಿ. ನಿಪಿ-8 ರಲ್ಲಿ ದಾವಾ ಆಸ್ತಿ ವೆಂಕಟನಾಯಕ ರವರ ಹೆಸರಿನಲ್ಲಿ ನಮೂದು ಇದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಿಪಿ-10 ರಿಂದ 13 ರಲ್ಲಿ ದಾವಾ ಆಸ್ತಿಯ ಖಾತೆ ವೆಂಕಟಯ್ಯ ಬಿನ್ ಜವರ ಎಂದು ನಮೂದು ಇದೆ ಎಂದರೆ ಸರಿ. ನಿಪಿ-14 ರಿಂದ 18 ರಲ್ಲಿ ದಾವಾ ಆಸ್ತಿಯ ಖಾತೆ ವೆಂಕಟಯ್ಯ ಬಿನ್ ಜವರ ಎಂದು ನಮೂದು ಇದೆ ಎಂದರೆ ಸರಿ. ವೆಂಕಟಯ್ಯ ಬಿನ್ ಜವರ ರವರಿಂದ ಅವರ ಐದು ಜನ ಮಕ್ಕಳಿಗೆ ಹಕ್ಕು ಬದಲಾವಣೆಯಾದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನುಹಾಜರುಪಡಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ದಾಖಲಾತಿ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-8 ರಲ್ಲಿ ಹಕ್ಕು ಬದಲಾವಣೆಯಾದ ಬಗ್ಗೆ ನಮೂದು ಇದ್ದು, ಅದನ್ನು ನೀವೇನಾದರೂ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಪಿ-19 ರಲ್ಲಿ ಎಂ.ಆರ್,58/1951-52 ರಂತೆ ಪೌತಿ ಎಂದು ನಮೂದು ಇದ್ಧು, ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ 14/2 ರ ಮೂರು ಪಹಣಿಗಳನ್ನು ತೋರಿಸಿದ್ದು, ಅದರಂತೆ ಪೌತಿ ಬದಲಾವಣೆಯಾದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-**19** ರಿಂದ **21** ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಹಿಂಬರಹಗಳನ್ನು ತೋರಿಸಿದ್ದು, ಸದರಿ ಹಿಂಬರಹದಂತೆ ಸ.ನಂ.14/2 ರ ಸಂಬಂಧ ಎಂ.ಆರ್,58/1951-52, 9/1981-82 ಮುಟೇಶನ ಲಭ್ಯ ಇರುವುದಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆಂದರೆ ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-**22** ಮತ್ತು **23** ಎಂದು

ಗುರುತಿಸಲಾಯಿತು.

ನಿಮಗೆ ಕ್ರಯ ಪತ್ರ ಬರೆದುಕೊಟ್ಟ ವೆಂಕಟನಾಯಕ, ಸಣ್ಣಮ್ಮ, ಹೊನ್ನಮ್ಮ, ಶ್ರೀನಿವಾಸ, ಬಸಮ್ಮ ಮತ್ತು ಇತರರಿಗೆ ನೀವು ಸೋದರಮಾವನಾಗಬೇಕೆಂದರೆ ಸರಿಯಲ್ಲ. ನಿಪಿ-1 ರಲ್ಲಿ ನಿಮಗೆ ಮಾರಾಟ ಮಾಡಿದ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಿದ್ದಾರೆಂದರೆ ಸರಿ. ನಿಮ್ಮ ತಾಯಿ ವೆಂಕಟಮ್ಮ, ವೆಂಕಟನಾಯಕ ರವರ ಮೊದಲನೇ ಮಗ ಮೂಗನಾಯಕರವರ ಮಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ತೋಳುಮಲೆ ಲಕ್ಕಪ್ಪ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ 1952 ರಲ್ಲಿ ತೋಳುಮಲೆ ಲಕ್ಕಪ್ಪ ರವರು 1 ಎಕರೆ ಜಮೀನನ್ನು ಕ್ರಯ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿ 5 ಮತ್ತು 6 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತಾಗಿದ್ದು, ಅವರಿಗೂ ಸಹ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ನಿಮಗೆ ಕ್ರಯ ಮಾಡಿದ ಕ್ರಯದಾರರರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಹಕ್ಕು, ಅಧಿಕಾರ ಇಲ್ಲ, ನೀವು ಅವರೊಂದಿಗೆ ಶಾಮಿಲಾಗಿ ಸುಳ್ಳು ಕ್ರಯ ಪತ್ರ ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ. ನೀವು ದಾವೆ ಹೂಡಿರುವ ದಾವಾ ಆಸ್ತಿಯ ನೈಜ ಮಾಲೀಕರನ್ನು ಬಿಟ್ಟು ಸುಳ್ಳು ಚೆಕ್ಕುಬಂಧಿ ನಮೂದಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಇಂದಿಗೂ ಸ್ವಾಧೀನ ಇದ್ದು, ಅವರನ್ನು ಕೈ ಬಿಟ್ಟು ಸುಳ್ಳು ದಾವೆ ಹೂಡಿರುತ್ತೀರಾ ಎಂದರೆ ಸರಿಯಲ್ಲ.

5 ಮತ್ತು 6 ನೇ ಪ್ರತಿವಾದಿ ವಕೀಲರು ಮುಂದುವರೆದು 1 ಮತ್ತು 2 ನೇ ಪ್ರತಿವಾದಿ ಪರ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

<u>ಮರುವಿಚಾರಣೆ ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.